"ಮಧುರ ಮಕ್ಕಳೇ - ಈ ಸಮಯದಲ್ಲಿ ಈ ಭಾರತಕ್ಕೆ ತಂದೆಯ ಶ್ರೀಮತದ ಅವಶ್ಯಕತೆಯಿದೆ, ಶ್ರೀಮತದಿಂದಲೇ ಕವಡೆಯ ಸಮಾನವಾಗಿರುವ ಭಾರತವು ವಜ್ರ ಸಮಾನವಾಗುವುದು, ಎಲ್ಲರ ಗತಿ-ಸದ್ಗತಿ ಆಗುವುದು"

ಪ್ರಶ್ನೆ: ಸರ್ವಶಕ್ತಿವಂತ ತಂದೆಯಲ್ಲಿ ಯಾವ ಶಕ್ತಿಯಿದೆ, ಅದು ಮನುಷ್ಯರಲ್ಲಿಲ್ಲ?

ಉತ್ತರ: ರಾವಣನನ್ನು ಸಾಯಿಸುವಂತಹ ಶಕ್ತಿಯು ಒಬ್ಬ ಸರ್ವಶಕ್ತಿವಂತ ತಂದೆಯಲ್ಲಿದೆ, ಮನುಷ್ಯರಲ್ಲಿಲ್ಲ. ರಾಮನ ಶಕ್ತಿಯಿಲ್ಲದೆ ಈ ರಾವಣನು ಸಾಯುವುದಿಲ್ಲ. ತಂದೆಯು ಯಾವಾಗ ಬರುತ್ತಾರೆ. ಆಗ ನೀವು ಮಕ್ಕಳಿಗೆ ಇಂತಹ ಶಕ್ತಿಯನ್ನು ಕೊಡುತ್ತಾರೆ. ಆದ್ದರಿಂದ ನೀವೂ ಸಹ ರಾವಣನ ಮೇಲೆ ವಿಜಯವನ್ನು ಪಡೆಯುತ್ತೀರಿ.

ಓಂ ಶಾಂತಿ. ಇದು ಪವಿತ್ರ ಹಂಸಗಳ ಸಭೆಯಾಗಿದೆ, ಇಲ್ಲಿ ಎಲ್ಲಾ ಬ್ರಾಹ್ಮಣರು ಕುಳಿತಿದ್ದಾರೆ ಎನ್ನುವುದನ್ನು ಮಧುರ ಮಕ್ಕಳು ತಿಳಿದುಕೊಂಡಿದ್ದೀರಿ. ಪವಿತ್ರರನ್ನು ಬ್ರಾಹ್ಮಣರೆಂದು ಹೇಳಲಾಗುತ್ತದೆ, ಅಪವಿತ್ರರಿಗೆ ಶೂದ್ರವರ್ಣದವರೆಂದು ಹೇಳಲಾಗುತ್ತದೆ. ಯಾರು ಅಪವಿತ್ರ ಪುರುಷಾರ್ಥಿಗಳಿದ್ದಾರೆ, ಅವರಿಗೆ ಹಾಫ್ ಕಾಸ್ಟ್ ಎಂದು ಹೇಳಲಾಗುತ್ತದೆ, ಅಲ್ಲಿಯೂ ಇಲ್ಲ, ಇಲ್ಲಿಯೂ ಇಲ್ಲ. ಒಂದು ಕಾಲು ಪಾರಾಗುವಂತಹ ಆ ದೋಣಿಯಲ್ಲಿ, ಇನ್ನೊಂದು ಕಾಲು ಈ ದೋಣಿಯಲ್ಲಿ ಇದ್ದರೆ ಜಾರಿ ಹೋಗುತ್ತಾರೆ ಆದ್ದರಿಂದ ನಿರ್ಣಯ ಮಾಡಬೇಕಾಗಿದೆ - ಯಾವ ಕಡೆ ಹೋಗಬೇಕು? ಒಂದುವೇಳೆ ಯಾರೇ ಆಸುರರು ಕುಳಿತಿರುವರೆಂದರೆ ವಿಘ್ನಗಳನ್ನು ಹಾಕುತ್ತಾರೆ. ಇದನ್ನು ಯಾರು ತಿಳಿಸುತ್ತಾರೆ? ಶಿವಬಾಬಾ ತಿಳಿಸುತ್ತಾರೆ. ಶಿವನಿಗೋಸ್ಕರವೇ ಬಾಬಾ ಎನ್ನುವ ಅಕ್ಷರವು ಬಾಯಿಯಿಂದ ಹೊರಡುತ್ತದೆ. ಶಿವ ತಂದೆಯೇ ಜೋಳಿಗೆಯನ್ನು ತುಂಬಿಸುವವರಾಗಿದ್ದಾರೆ. ಅವರಿಂದಲೇ ಅವಶ್ಯವಾಗಿ ಆಸ್ತಿಯು ಸಿಗುವುದು. ಅನೇಕ ಶಿವನ ಮಂದಿರಗಳಿವೆ, ಅವು ನಿರಾಕಾರ ಶಿವನದಾಗಿವೆ. ತಂದೆಯು ವಿಶ್ವದ ರಚಯಿತನಾಗಿದ್ದಾರೆ. ವಿಶ್ವದಲ್ಲಿ ಲಕ್ಷ್ಮೀ-ನಾರಾಯಣರ ರಾಜ್ಯವಿತ್ತು ಎಂದಾಗ ಅವಶ್ಯವಾಗಿ ತಂದೆಯಿಂದಲೇ ಆ ಆಸ್ತಿಯು ಸಿಕ್ಕಿರಬಹುದು. ಈಗ ನೀವು ಶೂದ್ರರಿಂದ ಬ್ರಾಹ್ಮಣರಾಗಿದ್ದೀರಿ, ಶೂದ್ರರು ಕಲ್ಲು ಬುದ್ಧಿಯವರಾಗಿದ್ದಾರೆ. ಲಕ್ಷ್ಮೀ-ನಾರಾಯಣ ಪಾರಸ ಬುದ್ಧಿಯವರಾಗಿದ್ದರಲ್ಲವೇ. ಮಾಯೆಯಿಂದ ಬುದ್ಧಿಯು ಬದಲಾಗಿ ಬಿಡುತ್ತದೆ. ಮಾಯಾ ರಾವಣನ ಹೆಸರು ಭಾರತದಲ್ಲಿ ಪ್ರಸಿದ್ಧವಾಗಿದೆ. ಈ ಸಮಯದಲ್ಲಿ ರಾವಣ ರಾಜ್ಯವಾಗಿದೆ. ಅರ್ಥಾತ್ ರಾವಣ ಸಂಪ್ರದಾಯವಾಗಿದೆ. ಆದ್ದರಿಂದ ರಾವಣನನ್ನು ಸಾಯಿಸುತ್ತಾರೆ ಆದರೆ ಸಾಯುವುದಿಲ್ಲ. ರಾಮನ ಶಕ್ತಿಯಿಲ್ಲದೆ ರಾವಣನ ಮೇಲೆ ವಿಜಯವನ್ನು ಪಡೆಯಲು ಸಾಧ್ಯವಿಲ್ಲ. ಸರ್ವಶಕ್ತಿವಂತನಿಂದಲೇ ಶಕ್ತಿಯು ಸಿಗುತ್ತದೆ. ಅವರು ಒಬ್ಬ ಪರಮಪಿತ ಪರಮಾತ್ಮನಾಗಿದ್ದಾರೆ. ಅವರಿಗೆ ಸೂಕ್ಷ್ಮ ಶರೀರವೂ ಇಲ್ಲ, ಸ್ಥೂಲ ಶರೀರವೂ ಇಲ್ಲ. ಅವರು ನಿರಾಕಾರ, ಮತ್ತೆ ಭಾರತದಲ್ಲಿ ಹೇಗೆ ಬಂದರು ಎನ್ನುವುದು ಯಾರ ಬುದ್ಧಿಯಲ್ಲಿಯೂ ಬರುವುದಿಲ್ಲ. ಆತ್ಮವು ಕರ್ಮೇಂದ್ರಿಗಳಿಲ್ಲದೆ ಕರ್ಮ ಮಾಡಲು ಸಾಧ್ಯವಿಲ್ಲ ಎನ್ನುವುದನ್ನು ತಿಳಿದುಕೊಂಡೇ ಇಲ್ಲ ಆದ್ದರಿಂದ ಕಲ್ಲು ಬುದ್ಧಿಯವರೆಂದು ಹೇಳಲಾಗುತ್ತದೆ. ತಂದೆಯು ಕುಳಿತು ತಿಳಿಸುತ್ತಾರೆ - ಭಗವಂತ ಶ್ರೇಷ್ಠಾತಿ ಶ್ರೇಷ್ಠ ಆಗಿದ್ದಾರೆ, ಅವರ ಮತವು ಎಲ್ಲರಿಗಿಂತ ಶ್ರೇಷ್ಠ ಮತವಾಗಿದೆ. ಇಲ್ಲವೆಂದರೆ ಭಗವಂತನ ಸ್ಮರಣೆಯನ್ನು ಏಕೆ ಮಾಡುತ್ತಾರೆ. ಅವರ ಮತವನ್ನು ಸ್ಮರಿಸುತ್ತಾರೆ. ಅವಶ್ಯವಾಗಿ ಭಗವಂತನು ಬರುವುದೂ ಸಹ ನಾಟಕದಲ್ಲಿ ಪಾತ್ರವಿದೆ. ಮನುಷ್ಯರು ತಿಳಿದುಕೊಂಡಿಲ್ಲ. ಅನೇಕರು ಹೇಳುತ್ತಾರೆ ಕ್ರೈಸ್ಟನಿಗಿಂತ ಮೊದಲು ಗೀತೆಯನ್ನು ತಿಳಿಸಲ್ಪಟ್ಟಿತ್ತು. ಇದನ್ನು ತಿಳಿಸಿ – ಮೂರು ಸಾವಿರ ವರ್ಷಗಳ ಹಿಂದೆ ಯಾರಿದ್ದರು? ಯಾರು ಗೀತೆಯನ್ನು ಹೇಳಿದರು? ಯಾವ ದೇಶಕ್ಕೆ, ಯಾವ ಯುಗದಲ್ಲಿ ಗೀತೆಯನ್ನು ಹೇಳಿದರು ಮತ್ತು ಯಾರು ಹೇಳಿದರು? ಒಂದೇ ಶಾಸ್ತ್ರದಲ್ಲಿ ಕೃಷ್ಣ ಭಗವಾನುವಾಚ ಎಂದು ಬರೆಯಲಾಗಿದೆ ನಂತರ ರುದ್ರ ಜ್ಞಾನ ಯಜ್ಞವೆಂದೂ ಹೇಳುತ್ತಾರೆ. ರುದ್ರನೆಂದು ಶಿವ ತಂದೆಗೆ ಹೇಳಲಾಗುತ್ತದೆ. ಕೃಷ್ಣನಿಗೆ ಎಂದೂ ತಂದೆಯೆಂದು ಹೇಳುವುದಿಲ್ಲ. ಶಿವ ತಂದೆ ಎಂದು ಹೇಳಲಾಗುತ್ತದೆ. ಶಿವ ತಂದೆಯೇ ಜ್ಞಾನ ಸಾಗರ, ಆನಂದ ಸಾಗರ ಆಗಿದ್ದಾರೆ, ಆದ್ದರಿಂದಲೇ ಭಕ್ತರೆಲ್ಲರೂ ಕೂಗುತ್ತಾರೆ. ಭಕ್ತಿಯ ನಂತರ ಭಗವಂತ ಸಿಗುತ್ತಾರೆಂದು ತಿಳಿಯುತ್ತಾರೆ. ಒಳ್ಳೆಯದು. ಭಕ್ತಿಯು ಯಾವಾಗ ಶುರುವಾಗುತ್ತದೆ, ಭಗವಂತನು ಯಾವಾಗ ಸಿಗುತ್ತಾರೆ? ಪಾಪಾತ್ಮರ ಪ್ರಪಂಚದಿಂದ ಪುಣ್ಯಾತ್ಮರ ಪ್ರಪಂಚದಲ್ಲಿ ಯಾವಾಗ ಹೋಗಬೇಕಾಗುತ್ತದೆ ಎನ್ನುವುದನ್ನು ಯಾರೂ ಅರಿತುಕೊಂಡಿಲ್ಲ. ನೀವೂ ಸಹ ಶೂದ್ರವರ್ಣದವರಾಗಿದ್ದಿರಿ. ಈಗ ನೀವು ಬ್ರಹ್ಮಾ ಮುಖವಂಶಾವಳಿ ಬ್ರಾಹ್ಮಣರೆಂದು ಕರೆಸಿಕೊಳ್ಳುತ್ತೀರಿ. ಬ್ರಾಹ್ಮಣರನ್ನಾಗಿ ಯಾರು ಮಾಡಿದರು? ಶಿವ ತಂದೆಯು ಮಾಡಿದರು. ಇವರು ರಚಯಿತನಾಗಿದ್ದಾರೆ. ಬ್ರಾಹ್ಮಣ ವರ್ಣವು ಎಲ್ಲದಕ್ಕಿಂತ ಶ್ರೇಷ್ಠವಾಗಿದೆ. ಬ್ರಾಹ್ಮಣರಿಗೆ ಶಿಖೆಯು ಇದೆ ಏಕೆಂದರೆ ಸಾಕಾರದಲ್ಲಿ ಇದ್ದೀರಲ್ಲವೇ. ಆದರೆ ಈ ರೀತಿ ಮಾಡುವವರು ನಿರಾಕಾರನಾಗಿದ್ದಾರೆ. ಅವರು ಪರಮಪಿತ ಪರಮ ಆತ್ಮ ಎಂದರೆ ಪರಮಾತ್ಮ ಆಗಿದ್ದಾರೆ, ಈ ಅಕ್ಷರವನ್ನು ಪಕ್ಕಾ ನೆನಪು ಮಾಡಿಕೊಳ್ಳಿ. ನಾಟಕದ ಅನುಸಾರ ಸೃಷ್ಟಿಯು ಯಾವಾಗ ತಮೋಪ್ರಧಾನವಾಗಿ ಬಿಡುತ್ತದೆ ಆಗ ನಾನು ಬರಬೇಕಾಗುತ್ತದೆ. ನಾನೂ ಸಹ ನಾಟಕದ ಬಂಧನದಲ್ಲಿ ಬಂಧಿತನಾಗಿದ್ದೇನೆ. ನಿಮ್ಮನ್ನು ಪತಿತರಿಂದ ಪಾವನರನ್ನಾಗಿ ಮಾಡಿ ಸುಖ-ಶಾಂತಿಯ ಆಸ್ತಿಯನ್ನು ಬಂದು ಕೊಡುತ್ತೇನೆ. ಉಳಿದೆಲ್ಲರಿಗೆ ಶಾಂತಿಯ ಆಸ್ತಿಯು ಸಿಗುತ್ತದೆ. ಅವಶ್ಯವಾಗಿ ಸತ್ಯಯುಗ, ತ್ರೇತಾ ಹೊಸ ಪ್ರಪಂಚವಾಗಿತ್ತು, ಅದನ್ನು ರಾಮನು (ತಂದೆಯು) ಸ್ಥಾಪನೆ ಮಾಡಿದರು. ರಾಮನಿಗಿಂತಲೂ ಶಿವಬಾಬಾ ಎನ್ನುವ ಅಕ್ಷರವು

ಸರಿಯಿದೆ. ಶಿವಬಾಬಾ ಅಕ್ಷರವು ಎಲ್ಲರ ಬಾಯಲ್ಲಿದೆ. ಅಂದಾಗ ಬಾಬಾ ಹೊಸ ಪ್ರಪಂಚದ ರಚಯಿತನಾಗಿದ್ದಾರೆ, ಅವರು ಬಂದು ಆಸ್ತಿಯನ್ನು ಕೊಡುತ್ತಾರೆ. ಗೀತೆಯನ್ನು ಬ್ರಾಹ್ಮಣರಿಗೇ ತಿಳಿಸಬೇಕಾಗಿದೆ. ಯಾವಾಗ ಶೂದ್ರರಿಂದ ಬ್ರಹ್ಮಾ ಮುಖವಂಶಾವಳಿ ಬ್ರಾಹ್ಮಣರಾದೆವು ಆಗಲೇ ನಮಗೆ ಗೀತೆಯು ಹೇಳಲಾಯಿತು. ಬ್ರಾಹ್ಮಣರ ಜ್ಞಾನದ ಮೂರನೆಯ ನೇತ್ರವು ತೆರೆಯಿತು. ಆದ್ದರಿಂದಲೇ ಜ್ಞಾನಾಂಜನವನ್ನು ಸದ್ಗುರು ಕೊಟ್ಟರು ಅಜ್ಞಾನ ಅಂಧಕಾರವು ವಿನಾಶವಾಯಿತು ಎಂದು ಹೇಳುತ್ತಾರೆ. ಬಾಬಾ ನಮ್ಮನ್ನು ನರಕದಂತಹ ಪ್ರಪಂಚದಿಂದ ಈಗ ಸ್ವರ್ಗದಲ್ಲಿ ಕರೆದುಕೊಂಡು ಹೋಗಿ ಎಂದು ಮಕ್ಕಳು ಹೇಳುತ್ತಾರೆ. ಇದು ಶಿವ ಭಗವಾನುವಾಚ, ಶಿವಾಚಾರ್ಯ ಉವಾಚ ಆಗಿದೆ, ಶಿವಾಚಾರ್ಯ (ಶಿವಬಾಬಾ) ಬೇಹದ್ದಿನ ಸನ್ಯಾಸವನ್ನು ಕಲಿಸುತ್ತಾರೆ. ಶಂಕರಾಚಾರ್ಯರದು ಹದ್ದಿನ ಸನ್ಯಾಸವಾಗಿದೆ. ಬೇಹದ್ದಿನ ತಂದೆಯು ಹೇಳುತ್ತಾರೆ- ಈ ಹಳೆಯ ಪ್ರಪಂಚವನ್ನು ಮರೆಯಿರಿ. ಈಗ ನೀವು ಸದಾ ಸುಖದ ಪ್ರಪಂಚದಲ್ಲಿ ಹೋಗಬೇಕಾಗಿದೆ. ಕೃಷ್ಣಪುರಿ ಮತ್ತು ಕಂಸಪುರಿ ಎಂದು ಹೇಳುತ್ತಾರಲ್ಲವೇ. ಸತ್ಯಯುಗವನ್ನು ಕೃಷ್ಣಪುರಿ ಎಂದೂ, ಕಲಿಯುಗವನ್ನು ಕಂಸಪುರಿ ಎಂದು ಹೇಳಲಾಗುತ್ತದೆ. ಇಬ್ಬರೂ ಜೊತೆಯಿರಲು ಸಾಧ್ಯವಿಲ್ಲ. ಸತ್ಯಯುಗದಲ್ಲಿ ಕಂಸನು ಎಲ್ಲಿಂದ ಬರುತ್ತಾರೆ? ಬುದ್ಧಿಯಿಂದ ಕೆಲಸ ತೆಗೆದುಕೊಳ್ಳಬೇಕಲ್ಲವೇ. ಈಗ ಸ್ವಯಂ ತಂದೆಯು ಸ್ವರ್ಗದ ಅಪಾರ ಸುಖವನ್ನು ಕೊಡಲು ಬಂದಿದ್ದಾರೆ.

ತಂದೆಯು ತಿಳಿಸುತ್ತಾರೆ- ಈ ಅಂತಿಮ ಜನ್ಮದಲ್ಲಿ ಯಾರು ಓದುತ್ತಾರೆಯೋ ಅವರೇ ಓದುತ್ತಾರೆ ನಂತರ ರಾಜಾಯಿ ಸ್ಥಾಪನೆ ಆಗಿಬಿಡುತ್ತದೆ. ತಂದೆಯೇ ಬಂದು ಶೂದ್ರರಿಂದ ಬ್ರಾಹ್ಮಣ ಸೋ ದೇವತೆಗಳನ್ನಾಗಿ ಮಾಡುತ್ತಾರೆ. ಅವರೆಲ್ಲರೂ ಹಿಂದುಗಳನ್ನು ಕ್ರಿಶ್ಚಿಯನ್ ಅಥವಾ ಬೌದ್ಧಿಯರನ್ನಾಗಿ ಮಾಡುತ್ತಾರೆ ಆದರೆ ಶೂದ್ರವರ್ಣವನ್ನು ಇವರು ಬ್ರಾಹ್ಮಣ ವರ್ಣವನ್ನಾಗಿ ಮಾಡಿದರು ಎಂದು ಇದನ್ನು ಎಂದಾದರೂ ಕೇಳಿದ್ದಿರಾ!. ಇದು ಶಿವ ತಂದೆಯದೇ ಕರ್ತವ್ಯವಾಗಿದೆ. ಅವರೇ ಬ್ರಾಹ್ಮಣರನ್ನು ಮತ್ತೆ ದೇವತೆಗಳನ್ನಾಗಿ ಮಾಡುತ್ತಾರೆ. ಪ್ರತಿಯೊಬ್ಬರು ತಮ್ಮೊಂದಿಗೆ ಕೇಳಿಕೊಳ್ಳಿ - ನಾವು ಮೊದಲು ಯಾವ ಧರ್ಮದಲ್ಲಿ ಮತ್ತು ಯಾವ ವರ್ಣದವರಾಗಿದ್ದೆವು? ಗುರು ಯಾರಾಗಿದ್ದರು? ಯಾವ ಶಾಸ್ತ್ರಗಳನ್ನು ಓದುತ್ತಿದ್ದೆವು? ಗುರುವಿನಿಂದ ಯಾವ ಮಂತ್ರವು ಸಿಕ್ಕಿತು? ನಂತರ ಯಾವಾಗಿನಿಂದ ಶಿವಬಾಬಾರವರು ಬ್ರಹ್ಮನ ಮುಖಾಂತರ ಬ್ರಾಹ್ಮಣ ವರ್ಣದಲ್ಲಿ ಕರೆತಂದರು? ಇದನ್ನು ಪ್ರತಿಯೊಬ್ಬರಿಂದ ಬರೆಸಬೇಕು. ಈಗ ನೀವು ಮಕ್ಕಳಿಗೆ ತಂದೆಯು ಹೇಳುತ್ತಾರೆ ಮಕ್ಕಳೇ ನನ್ನನ್ನು ನೆನಪು ಮಾಡಿ, ಮಾಯಾ ರಾವಣನು ನಿಮಗೆ ಎಂತಹ ದುರ್ದಶೆ ಮಾಡಿದ್ದಾನೆ. ಈಗ ನೀವು ಬ್ರಾಹ್ಮಣ ಸಂಪ್ರದಾಯದವರಾಗಿದ್ದೀರಿ, ನಂತರ ದೈವೀ ಸಂಪ್ರದಾಯದವರಾಗಬೇಕಾಗಿದೆ. ನಿಮ್ಮನ್ನು ನಿರಾಕಾರ ಪರಮಪಿತ ಪರಮಾತ್ಮನು ತಮ್ಮವರನ್ನಾಗಿ ಮಾಡಿಕೊಂಡಿದ್ದಾರೆ. ಪ್ರತಿಯೊಬ್ಬ ಮಗುವಿನಿಂದ ಬರೆಸಬೇಕು ನೀವು ಯಾವ ಧರ್ಮದವರಾಗಿದ್ದಿರಿ, ಯಾರನ್ನು ಪೂಜಿಸುತ್ತಿದ್ದಿರಿ? ಗುರುಗಳನ್ನು ಮಾಡಿಕೊಂಡಿದ್ದೀರಾ ಅಥವಾ ಇಲ್ಲವೋ? ನಂತರ ಬ್ರಾಹ್ಮಣ ವರ್ಣದಲ್ಲಿ ಯಾರು ಕರೆತಂದರು? ಈ ಬ್ರಹ್ಮಾ ತಂದೆಯೂ ಸಹ ಬರೆಯುತ್ತಾರೆ - ನಾನು ಹಿಂದೂ ಧರ್ಮದವನೆಂದು ಕರೆಸಿಕೊಂಡಿದ್ದೆ, ಅನೇಕ ಗುರುಗಳನ್ನು ಮಾಡಿಕೊಂಡಿದ್ದೆ, ಅನೇಕ ಶಾಸ್ತ್ರಗಳನ್ನು ಓದಿದ್ದೆ. ಸಿಖ್ಖರ್ಮದವರು ನಾವು ಸಿಖ್ಖರ್ಮದವರಾಗಿದ್ದೇವೆಂದು ಹೇಳುತ್ತಾರೆ. ಕೇವಲ ಭಾರತವಾಸಿಗಳಿಗೆ ತಮ್ಮ ದೇವೀ-ದೇವತಾ ಧರ್ಮವು ಗೊತ್ತಿಲ್ಲ. ಸಿಖ್ಖರ್ಮದವರು ತಮ್ಮನ್ನು ದೇವತೆಗಳೆಂದು ಕರೆಸಿಕೊಳ್ಳುವುದಿಲ್ಲ. ಪ್ರತಿಯೊಬ್ಬರು ತಮ್ಮನ್ನು ತಮ್ಮ ಧರ್ಮದವರೆಂದೇ ಹೇಳಿಕೊಳ್ಳುತ್ತಾರೆ. ಈಗ ತಂದೆಯು ಹೇಳುತ್ತಾರೆ - ಯಾರು ಶಿವನ ಭಕ್ತರು ಹಾಗೂ ಶಿವನ ರಚನೆ ದೇವೀ-ದೇವತೆಗಳ ಭಕ್ತರಿರುತ್ತಾರೆ, ಅವರಿಗೆ ತಿಳಿಸಬೇಕಾಗಿದೆ. ಅವರೇ ಒಳ್ಳೆಯ ರೀತಿಯಲ್ಲಿ ಕೇಳುತ್ತಾರೆ. ಸತ್ಯಯುಗ-ತ್ರೇತಾದಲ್ಲಿ ಅವಶ್ಯವಾಗಿ ಸೂರ್ಯವಂಶಿ, ಚಂದ್ರವಂಶಿ ಆಗಿದ್ದೆವು, ಅವರ ಚಿತ್ರಗಳೂ ಇದೆ. ಇಂಗ್ಲೀಷ್ನಲ್ಲಿ ಡೀಟೀಸಿಂ ಎಂದು ಹೇಳಲಾಗುತ್ತದೆ. ಈಗ ತಂದೆಯು ದೇವೀ-ದೇವತಾ ಧರ್ಮದ ಸ್ಥಾಪನೆ ಮಾಡುತ್ತಿದ್ದಾರೆ. ನೀವೀಗ ಬ್ರಾಹ್ಮಣ ವರ್ಣದಿಂದ ದೇವತಾ ವರ್ಣದವರಾಗುತ್ತಿದ್ದೀರಿ. ಭಾರತವಾಸಿಗಳೇ ತಾವೇ ಪೂಜ್ಯ, ತಾವೇ ಪೂಜಾರಿಗಳಾಗುತ್ತಾರೆ. ಸತ್ಯಯುಗದಲ್ಲಿ ಪೂಜ್ಯರಾಗಿದ್ದರು.... ತಂದೆಯು ಹೇಳುತ್ತಾರೆ- ನಾನು ಸದಾ ಪೂಜ್ಯನಾಗಿದ್ದೇನೆ. ಈಗ ನೀವಿಲ್ಲಿ ರಾಜಯೋಗವನ್ನು ಕಲಿಯಲು ಬಂದಿದ್ದೀರಿ. ಭವಿಷ್ಯ 21 ಜನ್ಮಗಳಿಗೋಸ್ಕರ ಶಿವಬಾಬಾರವರಿಂದ ಆಸ್ತಿಯನ್ನು ತೆಗೆದುಕೊಳ್ಳಲು ಬಂದಿದ್ದೀರಿ ಎಂದಾಗ ಅನುಕರಣೆ ಮಾಡಬೇಕು. ಎಲ್ಲಿಯತನಕ ನೀವು ಬ್ರಹ್ಮಾವಂಶಿಯರಾಗುವುದಿಲ್ಲ ಅಲ್ಲಿಯತನಕ ಬ್ರಾಹ್ಮಣರೆಂದು ಹೇಗೆ ಕರೆಸಿಕೊಳ್ಳುತ್ತೀರಿ? ಒಳ್ಳೆಯದು.

ಇಂದು ಭೋಗದ ದಿನವಾಗಿದೆ, ಬ್ರಾಹ್ಮಣರಿಗೆ ತಿನ್ನಿಸುವ ಪದ್ಧತಿಯು ಇದೆ. ಬಾಕಿ ಜ್ಞಾನಕ್ಕೆ ಇದರೊಂದಿಗೆ ಸಂಬಂಧವಿಲ್ಲ. ಇಲ್ಲಿ ಜ್ಞಾನಸಾಗರ ಮತ್ತು ಜ್ಞಾನ ಗಂಗೆಯರ ಮಿಲನವಾಗಿದೆ. ಅಲ್ಲಿ ದೇವತೆಗಳು ಮತ್ತು ನೀವು ಬ್ರಾಹ್ಮಣರ ಮೇಳವಾಗುತ್ತದೆ, ಇದರಲ್ಲಿ ಗೊಂದಲರಾಗುವ ಮಾತಿಲ್ಲ. ತಂದೆಯು ಹೇಳುತ್ತಾರೆ ದೇಹ ಸಹಿತ ದೇಹದ ಎಲ್ಲಾ ಸಂಬಂಧಗಳೊಂದಿಗಿನ ಮಮತ್ವವನ್ನು ತೆಗೆಯಿರಿ. ನನ್ನೊಬ್ಬನನ್ನೇ ನೆನಪು ಮಾಡುವುದರಿಂದ ಅಂತಿಮತಿ ಸೋ ಗತಿ ಆಗುವುದು. ನಾನು ನಿಮ್ಮನ್ನು ಸ್ವರ್ಗದಲ್ಲಿ ಕಳಿಸುತ್ತೇನೆಂದು ಪ್ರತಿಜ್ಞೆ ಮಾಡುತ್ತೇನೆ. ಪ್ರತಿದಿನ ಕ್ಲಾಸಿನಲ್ಲಿ ಕೇಳಿ-ಶಿವಬಾಬಾನ ಜೊತೆ ನೀವು ಪ್ರತಿಜ್ಞೆ ಮಾಡುತ್ತೀರಾ! ತಂದೆಯು ಹೇಳುತ್ತಾರೆ ನನ್ನ ಮತದಮೇಲೆ ನಡೆಯಿರಿ. ತಂದೆಯ ಶ್ರೀಮತವು ಪ್ರಸಿದ್ಧವಾಗಿದೆ. ಶ್ರೀಮತ ಅರ್ಥಾತ್ ಶ್ರೇಷ್ಠ ಮತ. ಬ್ರಹ್ಮನ ಮತದ ಗಾಯನ ಮಾಡಲಾಗಿದೆ ಆದರೆ ಬ್ರಹ್ಮನಿಗಿಂತಲೂ ಬ್ರಹ್ಮನ ತಂದೆ ಶಿವಬಾಬಾ ಶ್ರೇಷ್ಠರಾಗಿದ್ದಾರಲ್ಲವೇ. ಯಾವಾಗ ನೀವು ಭೋಜನಕ್ಕೆ ಕುಳಿತುಕೊಳ್ಳುತ್ತೀರಿ, ಆಗ ಶಿವ ತಂದೆಯನ್ನು ನೆನಪು ಮಾಡಿ. ಪ್ರಿಯಾತಿ ಪ್ರಿಯ ತಂದೆ ಆಗಿದ್ದಾರೆ.

ಅವರ ಜೊತೆ ನಾವು ಭೋಜನವನ್ನು ತೆಗೆದುಕೊಳ್ಳುತ್ತಿದ್ದೇವೆ. ಈ ನೆನಪಿನಿಂದ ತುಂಬಾ ಶಕ್ತಿ ಬರುತ್ತದೆ. ಆದರೆ ಮಕ್ಕಳು ಗಳಿಗೆ-ಗಳಿಗೆಯು ಮರೆತು ಹೋಗುತ್ತಾರೆ. ಭಾರತಕ್ಕೆ ಈಗ ಶಿವಬಾಬಾರವರ ಶ್ರೀಮತದ ಅವಶ್ಯಕತೆ ಇದೆ, ಏಕೆಂದರೆ ತಂದೆಯೇ ಸರ್ವರ ಸದ್ಗತಿದಾತ, ಪತಿತ ಪಾವನರಾಗಿದ್ದಾರಲ್ಲವೇ. ಮಾಯೆಯು ಅನೇಕ ವಿಘ್ನಗಳನ್ನು ಹಾಕುತ್ತದೆ, ಅದರಿಂದ ಹೆದರಬಾರದಾಗಿದೆ. ಬೇರೆ ಜಾಗಗಳಲ್ಲಿ ಅಲೆದಾಡುವುದಕ್ಕಿಂತ ಒಬ್ಬ ಶಿವಬಾಬಾರವರನ್ನು ನೆನಪು ಮಾಡುವುದು ಒಳ್ಳೆಯದಲ್ಲವೇ. ಗೀತೆಯನ್ನು ಓದುವ ಮಾತಿಲ್ಲ. ಏಕೆಂದರೆ ತಂದೆಯು ಸ್ವಯಂ ಬಂದಿದ್ದಾರೆ. ಉಳಿದ ಎಲ್ಲಾ ಶಾಸ್ತ್ರಗಳು ಬಾಲ ಮಕ್ಕಳಾಗಿವೆ. ಅವುಗಳಿಂದ ಆಸ್ತಿಯು ಸಿಗಲು ಸಾಧ್ಯವಿಲ್ಲ. ಬೇಹದ್ದಿನ ಆಸ್ತಿಯು ಬೇಹದ್ದಿನ ತಂದೆಯಿಂದಲೇ ಸಿಗುತ್ತದೆ. ಒಳ್ಳೆಯದು.

ಬಾಪ್ದಾದಾರವರು ಮಕ್ಕಳ ಸಮ್ಮುಖದಲ್ಲಿ ಕುಳಿತಿದ್ದಾರೆ. ತಂದೆಯು ಹೇಳುತ್ತಾರೆ - ನಾನು ನಿಮ್ಮ ತಂದೆ ಬ್ರಹ್ಮಾರವರ ಮುಖಾಂತರ ಮಮ್ಮಾರವರ, ದಾದಾರವರ, ಮಕ್ಕಳ ಎಲ್ಲರಿಗೂ ನೆನಪು, ಪ್ರೀತಿ ಕೊಡುತ್ತೇನೆ. ಒಳ್ಳೆಯದು - ಈಗ ಮಕ್ಕಳೊಂದಿಗೆ ವಿದಾಯಿ.

ಮಧುರಾತಿ ಮಧುರ ಅಗಲಿ ಹೋಗಿ ಮರಳಿ ಸಿಕ್ಕಿರುವಂತಹ ಮಕ್ಕಳಿಗೆ ಪ್ರೀತಿಯ ಮಾತ್-ಪಿತ ಬಾಪ್ ದಾದಾರವರ ನೆನಪು ಪ್ರೀತಿ ಹಾಗೂ ಸುಪ್ರಭಾತ. ಆತ್ಮೀಯ ತಂದೆಯ ಆತ್ಮೀಯ ಮಕ್ಕಳಿಗೆ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1. ಪ್ರಿಯಾತಿ ಪ್ರಿಯ ತಂದೆಯನ್ನು ಜೊತೆಯಲ್ಲಿ ಇಟ್ಟುಕೊಂಡು ಭೋಜನ ಮಾಡಬೇಕಾಗಿದೆ. ಒಬ್ಬ ತಂದೆಯೊಂದಿಗೆ ಬುದ್ಧಿಯೋಗವನ್ನು ಜೋಡಿಸಬೇಕಾಗಿದೆ. ಒಬ್ಬರ ಶ್ರೀಮತದಂತೆ ನಡೆಯಬೇಕಾಗಿದೆ.

2. ಬುದ್ಧಿಯಿಂದ ಬೇಹದ್ದಿನ ಹಳೆಯ ಪ್ರಪಂಚವನ್ನು ಮರೆಯಬೇಕಾಗಿದೆ, ಇದೇ ಸನ್ಯಾಸ ಮಾಡಬೇಕಾಗಿದೆ.

ವರದಾನ: ದೇಹ, ದೇಹದ ಸಂಬಂಧ ಹಾಗೂ ಪದಾರ್ಥಗಳ ಬಂಧನದಿಂದ ಮುಕ್ತರಾಗಿರುವಂತಹ ಜೀವನ್ಮುಕ್ತ ಫರಿಶ್ತಾ ಭವ.
ಫರಿಶ್ತಾ ಅರ್ಥಾತ್ ಹಳೆಯ ಪ್ರಪಂಚ ಹಾಗೂ ಹಳೆಯ ದೇಹದೊಂದಿಗೆ ಸೆಳೆತದ ಸಂಬಂಧವಿರುವುದಿಲ್ಲ. ದೇಹದೊಂದಿಗೆ ಆತ್ಮದ ಸಂಬಂಧವಿದೆ ಆದರೆ ಸೆಳೆತದ ಸಂಬಂಧವಿಲ್ಲ. ಕರ್ಮೇಂದ್ರಿಯಗಳಿಂದ ಕರ್ಮದ ಸಂಬಂಧದಲ್ಲಿ ಬರುವುದು ಬೇರೆ ಮಾತಾಗಿದೆ ಆದರೆ ಕರ್ಮ ಬಂಧನದಲ್ಲಿ ಬರಬಾರದು. ಫರಿಶ್ತಾ ಎಂದರೆ ಕರ್ಮವನ್ನು ಮಾಡುತ್ತಿದ್ದರೂ ಕರ್ಮ ಬಂಧನದಿಂದ ಮುಕ್ತರಾಗಿರುವುದು. ದೇಹದ ಬಂಧನವೂ ಇಲ್ಲ, ದೇಹದ ಸಂಬಂಧದ ಬಂಧನವೂ ಇಲ್ಲ, ದೇಹದ ಪದಾರ್ಥಗಳ ಬಂಧನವೂ ಇಲ್ಲ - ಇಂತಹ ಬಂಧನ ಮುಕ್ತರಾಗಿರುವವರೇ ಜೀವನ್ಮುಕ್ತ ಫರಿಶ್ತಾ ಆಗಿದ್ದಾರೆ.

ಸ್ಲೋಗನ್: ಸ್ಥೂಲ ಸಂಪತ್ತಿಗಿಂತಲೂ ಅಧಿಕ ಅಮೂಲ್ಯವಾದುದು - ಆತ್ಮಿಕ ಸ್ನೇಹದ ಸಂಪತ್ತು.

ಮಾತೇಶ್ವರಿಯವರ ಅಮೂಲ್ಯ ಮಹಾವಾಕ್ಯ:

ಸೌಭಾಗ್ಯ ಮತ್ತು ದುರ್ಭಾಗ್ಯ- ಈಗ ಇವೆರಡು ಶಬ್ದಗಳ ಆಧಾರ ಯಾವುದರ ಮೇಲೆ ನಡೆಯುತ್ತದೆ? ಸೌಭಾಗ್ಯವನ್ನು ರೂಪಿಸುವವರು ಪರಮಾತ್ಮನಾಗಿದ್ದಾರೆ ಎನ್ನುವುದನ್ನಂತು ತಿಳಿದಿದ್ದೀರಿ ಅಂದಮೇಲೆ ದುರ್ಭಾಗ್ಯವನ್ನು ಮಾಡಿಸುವವನು ಸ್ವಯಂ ಮನುಷ್ಯನಾಗಿದ್ದಾನೆ. ಯಾವಾಗ ಮನುಷ್ಯ ಸಕಲ ಸುಖದಿಂದ ಇರುತ್ತಾನೆಂದರೆ, ಅವರಿಗೆ ಒಳ್ಳೆಯ ಅದೃಷ್ಟವೆಂದು ಹೇಳುತ್ತಾರೆ ಮತ್ತು ಯಾವಾಗ ಮನುಷ್ಯನು ತನ್ನನ್ನು ದುಃಖಿಯೆಂದು ತಿಳಿಯುತ್ತಾರೆಯೋ ಆಗ ತನ್ನನ್ನು ದುರ್ಭಾಗ್ಯವೆಂದು ತಿಳಿಯುತ್ತಾರೆ. ನಾವು ಈ ರೀತಿ ಹೇಳುವುದಿಲ್ಲ- ದುರ್ಭಾಗ್ಯ ಅಥವಾ ಸೌಭಾಗ್ಯವನ್ನು ಪರಮಾತ್ಮನ ಮೂಲಕ ಸಿಗುತ್ತದೆ ಎಂದಲ್ಲ. ಅದೃಷ್ಟವನ್ನು ಹಾಳು ಮಾಡುವುದು ಅಥವಾ ತಯಾರು ಮಾದುವುದೆಲ್ಲವೂ ಕರ್ಮಗಳ ಮೇಲೆಯೇ ಆಧಾರಿತವಾಗಿದೆ. ಇದೆಲ್ಲವೂ ಮನುಷ್ಯನ ಸಂಸ್ಕಾರಗಳ ಮೇಲೆಯೇ ಇದೆ, ನಂತರ ಪಾಪ ಮತ್ತು ಪುಣ್ಯದ ಸಂಸ್ಕಾರವು ಹೇಗೆ ತುಂಬುತ್ತದೆಯೋ ಹಾಗೆಯೇ ಅದೃಷ್ಟವಾಗುವುದು ಆದರೆ ಮನುಷ್ಯನು ಇದನ್ನು ತಿಳಿಯದೇ ಇರುವ ಕಾರಣ, ಪರಮಾತ್ಮನ ಮೇಲೆ ದೋಷವನ್ನಿಡುತ್ತಾರೆ. ಈಗ ನೋಡಿ, ಮನುಷ್ಯನು ತನ್ನನ್ನು ಸುಖಿಯಾಗಿಡುವುದಕ್ಕಾಗಿ ಮಾಯೆಯ ಎಷ್ಟೊಂದು ವಿಧಿಗಳನ್ನು ರಚಿಸುತ್ತಾರೆ, ನಂತರ ಅದೇ ಮಾಯೆಯಿಂದ ಕೆಲವರು ತನ್ನನ್ನು ಸುಖಿಯಿಂದ ತಿಳಿಯುತ್ತಾರೆ, ಮತ್ತೆ ಕೆಲವರು ಅದೇ ಮಾಯೆಯ ಸನ್ಯಾಸ ಮಾಡಿ ಮಾಯೆಯನ್ನು ಬಿಡುವುದರಿಂದ ಸ್ವಯಂನ್ನು ಸುಖಿಯೆಂದು ತಿಳಿಯುತ್ತಾರೆ. ಅಂದರೆ ಹಲವು ಪ್ರಕಾರದ ಪ್ರಯತ್ನ ಮಾಡುತ್ತಾರೆ ಆದರೆ ಇಷ್ಟೆಲ್ಲಾ ಪ್ರಕಾರದಿಂದ ಮಾಡುತ್ತಿದ್ದರೂ ಫಲಿತಾಂಶ ದುಃಖದ ಕಡೆಗೆ ಹೋಗುತ್ತಿದೆ. ಯಾವಾಗ ಸೃಷ್ಟಿಯಲ್ಲಿ ಬಹಳ

ದುಃಖವಾಗುತ್ತದೆಯೋ ಆಗ ಅದೇ ಸಮಯದಲ್ಲಿ ಸ್ವಯಂ ಪರಮಾತ್ಮನು ಬಂದು, ಗುಪ್ತ ರೂಪದಲ್ಲಿ ತನ್ನನ್ನು ಈಶ್ವರೀಯ ಯೋಗ ಶಕ್ತಿಯಿಂದ ದೈವೀ ಸೃಷ್ಟಿಯ ಸ್ಥಾಪನೆ ಮಾಡಿಸಿ, ಎಲ್ಲಾ ಮನುಷ್ಯಾತ್ಮರಿಗೂ ಅದೃಷ್ಟವನ್ನು ರೂಪಿಸುತ್ತಾರೆ.

2. ಮನುಷ್ಯನು ಹಾಡುತ್ತಾರೆ - ನೀವು ಮಾತಾಪಿತಾ ನಾವು ನಿಮ್ಮ ಬಾಲಕರು... ನಿಮ್ಮ ಕೃಪೆಯಿಂದ ಸುಖದ ಗಣಿ... ಈಗ ಈ ಮಹಿಮೆ ಯಾರಿಗಾಗಿ ಹಾಡಲಾಗಿದೆ? ಅವಶ್ಯವಾಗಿ ಪರಮಾತ್ಮನಾಗಿ ಮಹಿಮೆ ಮಾಡುತ್ತಾರೆ ಏಕೆಂದರೆ ಪರಮಾತ್ಮನೇ ಸ್ವಯಂ ಮಾತಾ ಪಿತನ ರೂಪದಲ್ಲಿ ಬಂದು, ಈ ಸೃಷ್ಟಿಗೆ ಅಪಾರ ಸುಖವನ್ನು ಕೊಡುತ್ತಾರೆ. ಅವಶ್ಯವಾಗಿ ಯಾವಾಗಲೋ ಪರಮಾತ್ಮನು ಸುಖದ ಸೃಷ್ಟಿಯನ್ನು ತಯಾರು ಮಾಡಿದ್ದಾರೆ. ಆದ್ದರಿಂದ ಅವರನ್ನು ಮಾತಾ ಪಿತಾ ಎಂದು ಹೇಳುತ್ತಾ ಕರೆಯುತ್ತಾರೆ ಆದರೆ ಮನುಷ್ಯರಿಗೆ ಇದು ಗೊತ್ತೇ ಇಲ್ಲ - ಸುಖ ಎಂತಹ ವಸ್ತುವಾಗಿದೆ? ಯಾವಾಗ ಈ ಸೃಷ್ಟಿಯಲ್ಲಿ ಅಪಾರ ಸುಖವಿತ್ತೋ ಆಗ ಶಾಂತಿಯೂ ಇತ್ತು ಆದರೆ ಆ ಸುಖವೀಗ ಇಲ್ಲ. ಈಗ ಮನುಷ್ಯನಲ್ಲಿ ಈ ಬಯಕೆಯೂ ಉತ್ಪನ್ನವಾಗುತ್ತದೆ - ಆ ಸುಖ ನಮಗೀಗ ಬೇಕು, ನಂತರ ಕೆಲವರು ಹಣ ಪದಾರ್ಥಗಳನ್ನೂ ಬೇಡುತ್ತಾರೆ, ಕೆಲವು ಮಗುವನ್ನು ಬೇಡುತ್ತಾರೆ, ಕೆಲವರು ಹಾಗೆಯೇ ಬೇಡುತ್ತಾರೆ - ನಾವು ಪತಿವ್ರತಾ ನಾರಿಯಾಗಬೇಕು, ಎಲ್ಲಿಯವರೆಗೆ ನನ್ನ ಪತಿ ಬದುಕಿರುತ್ತಾನೆಯೋ, ನಾವು ವಿಧವೆಯಾಗಬಾರದು. ಈ ಬಯಕೆಯೆಲ್ಲವೂ ಸುಖಕ್ಕಾಗಿಯೇ ಇರುತ್ತದೆಯಲ್ಲವೆ. ಅಂದಾಗ ಪರಮಾತ್ಮನೂ ಸಹ ಯಾವುದೋ ಸಮಯದಲ್ಲಿ ಅವರ ಆಸೆಯನ್ನು ಅವಶ್ಯವಾಗಿ ಪೂರ್ಣ ಮಾಡಿರಬೇಕು. ಸತ್ಯಯುಗದ ಸಮಯದಲ್ಲಿ ಯಾವಾಗ ಸೃಷ್ಟಿಯಲ್ಲಿ ಸ್ವರ್ಗವಿತ್ತು, ಆಗ ಅಲ್ಲಿ ಸದಾ ಸುಖವಿದೆ, ಅಲ್ಲಿ ಸ್ತ್ರೀಯೆಂದಿಗೂ ವಿಧವೆಯಾಗುವುದಿಲ್ಲ. ಆ ಆಸೆಯಂತು ಸತ್ಯಯುಗದಲ್ಲಿಯೇ ಪೂರ್ಣವಾಗುವುದು, ಅದರಿಂದ ಅಲ್ಲಿ ಅಪಾರ ಸುಖವಿದೆ. ಈ ಸಮಯವಂತು ಇರುವುದೇ ಕಲಿಯುಗ, ಈ ಸಮಯದಲ್ಲಿ ಮನುಷ್ಯನು ಕೇವಲ ದುಃಖವನ್ನೇ ಅನುಭವಿಸುತ್ತಾನೆ. ದುಃಖಿಯಾದ ಮನುಷ್ಯನು ಹೇಳುತ್ತಾನೆ - ಪ್ರಭುವಿನ ಹೆಸರಿನ ನೆನಪಿನಲ್ಲಿದ್ದು ಅನುಭವಿಸಬೇಕು. ಆದರೆ ಅಂತಹವರೆಂದಿಗೂ ದುಃಖಿಯಾಗಲು ಸಾಧ್ಯವಿಲ್ಲ. ಅವರು ನಮ್ಮ ಕರ್ಮಗಳ ಖಾತೆಯನ್ನೇ ಸಮಾಪ್ತಿ ಮಾಡಿಸುತ್ತಾರೆ, ಆದ್ದರಿಂದಲೇ ನಾವು ಹೇಳುತ್ತೇವೆ - ನೀವು ಮಾತಾಪಿತಾ ನಾವು ನಿಮ್ಮ ಬಾಲಕರು..... ಒಳ್ಳೆಯದು. ಓಂ ಶಾಂತಿ.